## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 653 (764)
ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು
ಉತ್ತರಿಸಬೇಕಾದ ದಿನಾಂಕ : 10.03.2026
ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ರಾಜ್ಯದ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಲಾಗಿರುವ ಆರೋಗ್ಯ ಉಪಕರ, ಗ್ರಂಥಾಲಯ ಉಪಕರ ಮತ್ತು ಭಿಕ್ಷಾಟನಾ ಉಪಕರಗಳ ಹಣವೆಷ್ಟು; (ವರ್ಷವಾರು ವಿವರ ನೀಡುವುದು) | 2022-23 ರಿಂದ 2024-25 ರವರೆಗೆ ರಾಜ್ಯದ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಲಾದ, ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿಸಲಾದ ಹಾಗೂ ಬಾಕಿ ಉಳಿದಿರುವ ಆರೋಗ್ಯ ಉಪಕರ, ಗ್ರಂಥಾಲಯ ಉಪಕರ ಮತ್ತು ಭಿಕ್ಷಾಟನಾ ಉಪಕರಗಳ ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ಸಂಗ್ರಹಿಸಲಾಗಿರುವ ಸೆಸ್ ಹಣವನ್ನು ಸಂಬಂಧಪಟ್ಟ ಇಲಾಖೆಗಳಿಗೆ ವರ್ಗಾಯಿಸಲಾಗಿದೆಯೇ; (ಇದರ ಪೂರ್ಣ ವಿವರ ಒದಗಿಸುವುದು) | |
| ಇ) | ಈ ರೀತಿ ಸಂಗ್ರಹಿಸಲಾದ ಉಪಕರವನ್ನು ಯಾವ ಯಾವ ಕಾರ್ಯಗಳಿಗೆ ಎಷ್ಟೆಷ್ಟು ಮೊತ್ತವನ್ನು ಬಳಕೆ ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು) | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆಯೊಂದಿಗೆ ಸಂಗ್ರಹಿಸಲಾಗುವ ಎಲ್ಲಾ ರೀತಿಯ ಉಪಕರಗಳನ್ನು ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ Escrow ಖಾತೆಗಳ ಮೂಲಕ ಪಾವತಿ ಮಾಡಲಾಗುತ್ತಿದೆ. ಸದರಿ ಉಪಕರಗಳ ಮೊತ್ತವನ್ನು ಬಳಕೆ ಮಾಡಲಾಗುತ್ತಿರುವ ಬಗ್ಗೆ ವಿವರವನ್ನು ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಂದ ಪಡೆಯಬಹುದಾಗಿರುತ್ತದೆ. |
| ಈ) | ಕಳೆದ 3 ವರ್ಷಗಳಿಂದ ಸ್ಥಳೀಯ ಸಂಸ್ಥೆಗಳು ರೂ.504.00 ಕೋಟಿ ಆರೋಗ್ಯ ಸೆಸ್, ರೂ.54.00 ಕೋಟಿ ಗ್ರಂಥಾಲಯ ಉಪಕರ ಮತ್ತು ರೂ.30.00 ಕೋಟಿ ಭಿಕ್ಷಾಟನಾ ಸೆಸ್ ಹಣವನ್ನು ಇದುವರೆಗೂ ಸಂಬಂಧಪಟ್ಟ ಇಲಾಖೆಗಳ ಖಾತೆಗೆ ವರ್ಗಾಯಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ತಗೆದುಕೊಂಡ ಕ್ರಮವೇನು ಹಾಗೂ ಇದು ಕಾಯ್ದೆಯ ನಿಬಂಧನೆಗಳ ಉಲ್ಲಂಘನೆಯಾಗುವುದಿಲ್ಲವೇ? | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆಯೊಂದಿಗೆ ಸಂಗ್ರಹಿಸಲಾಗುವ ಉಪಕರಗಳನ್ನು ಸ್ವಯಂ ಚಾಲಿತವಾಗಿ ಉಪಕರ ಮೀಸಲು ಬ್ಯಾಂಕ್ ಖಾತೆಗೆ (CESSES ESCROW BANK ACCOUNT) ವರ್ಗಾಯಿಸಿ, ತದನಂತರ ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರಗಳಿಗೆ ವರ್ಗಾಯಿಸಲು ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡು ಮಾಡಲಾಗಿದೆ. ಈ ಕುರಿತು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಬಾಕಿ ಇರುವ ಎಲ್ಲಾ ಉಪಕರಗಳನ್ನು ಪ್ರತಿ 3 ತಿಂಗಳಿಗೊಮ್ಮೆ ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರಗಳಿಗೆ ಪಾವತಿಸಲು ಕ್ರಮ ಕೈಗೊಳ್ಳುವಂತೆ ಈಗಾಗಲೇ ಪೌರಾಡಳಿತ ನಿರ್ದೇಶನಾಲಯದಿಂದ ಅಗತ್ಯ ಸೂಚನೆ / ನಿರ್ದೇಶನ ನೀಡಲಾಗಿದ್ದು, ಅದರಂತೆ ಹಂತ ಹಂತವಾಗಿ ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರಗಳಿಗೆ ಪಾವತಿ ಮಾಡಲಾಗುತ್ತಿದೆ. |

**ಸಂಖ್ಯೆ: ನಅಇ 68 ಜಿಇಎಲ್ 2025 (ಇ)**

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ -1

## Beggary Cess details

| | | | | | | in Crores |
|---|---|---|---|---|---|---|
| **Si No** | **Year** | **Opening Balance** | **Beggary Cess Collection** | **Total** | **Beggary Cess Payment** | **Balance** |
| 1 | **2022-23** | 30.21 | 27.55 | 57.76 | 25.46 | 32.30 |
| 2 | **2023-24** | 32.43 | 32.83 | 65.26 | 31.13 | 34.13 |
| 3 | **2024-25** | 34.35 | 36.59 | 70.94 | 34.54 | **36.40** |

## Health Cess details

| | | | | | | in Crores |
|---|---|---|---|---|---|---|
| **Si No** | **Year** | **Opening Balance** | **Health Cess Collection** | **Total** | **Health Cess Payment** | **Balance** |
| 1 | **2022-23** | 501.62 | 141.71 | 643.33 | 117.18 | **526.15** |
| 2 | **2023-24** | 526.30 | 168.20 | 694.49 | 159.87 | **534.62** |
| 3 | **2024-25** | 535.82 | 190.61 | 726.43 | 159.07 | **567.35** |

## Library Cess details

| | | | | | | in Crores |
|---|---|---|---|---|---|---|
| **Si No** | **Year** | **Opening Balance** | **Library Cess Collection** | **Total** | **Library Cess Payment** | **Balance** |
| 1 | **2022-23** | 55.29 | 55.30 | 110.59 | 46.31 | **64.28** |
| 2 | **2023-24** | 64.14 | 66.05 | 130.19 | 67.33 | **62.86** |
| 3 | **2024-25** | 62.54 | 73.01 | 135.55 | 69.79 | **65.76** |

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು